# ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ, ತೆಂಕಿಲ – ಪುತ್ತೂರು

‘ಏಕಲವ್ಯ’ ಕ್ರೀಡಾ ವೇದಿಕೆ ವತಿಯಿಂದ

# ‘ಸದೃಢ ಭಾರತ’ ಸಪ್ತಾಹ – ೨೦೨೧

## ಉದ್ಘಾಟನಾ ಕಾರ್ಯಕ್ರಮ

ಸದೃಢ ಭಾರತ ಸಪ್ತಾಹ-೨೦೨೧ ರ ಉದ್ಘಾಟನೆಯನ್ನು ಘೋಷ್ ನ ಮೂಲಕ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀಯುತ ರಮೇಶ್ಚಂದ್ರ ರವರು ನೆರವೇರಿಸಿದರು. ವೇದಿಕೆಯಲ್ಲಿ ಶಾಲಾ ಸಂಚಾಲಕರಾದ ಶ್ರೀಯುತ ವಸಂತ ಸುವರ್ಣ, ಕೋಶಾಧಿಕಾರಿ ಶ್ರೀಯುತ ಅಶೋಕ್ ಕುಂಬ್ಳೆ ಹಾಗೂ ಆಡಳಿತ ಮಂಡಳಿಯ ಇತರ ಸದಸ್ಯರು , ಜೊತೆಗೆ ಶಾಲಾ ಮುಖ್ಯಗುರುಗಳು ಉಪಸ್ಥಿತರಿದ್ದರು.



# ಮೊದಲನೇ ದಿನ : ಜಾನಪದ ನೃತ್ಯ

ಶಾಲೆಯ ೬ರಿಂದ ೧೦ ನೇ ತರಗತಿಯ ಒಟ್ಟು ೩೦೦ ಮಕ್ಕಳನ್ನು ಒಳಗೊಂಡು, ಕಂಸಾಳೆ, ಕೋಲಾಟ ಹಾಗೂ ಹುಲಿ ಕುಣಿತದ ತುಣುಕುಗಳನ್ನು ಸುಮಾರು ೧೦ ನಿಮಿಷಗಳ ಕಾಲ ವಿದ್ಯಾರ್ಥಿಗಳು ಪ್ರದರ್ಶಿಸಿದರು. ಮುಖ್ಯಗುರುಗಳ ಸಲಹೆಯೊಂದಿಗೆ ಕ್ರೀಡಾ ಶಿಕ್ಷಕರ ನೇತೃತ್ವದಲ್ಲಿ ಎಲ್ಲಾ ಶಿಕ್ಷಕರ ಸಹಕಾರದೊಂದಿಗೆ ನೆರವೇರಿತು.







# ಎರಡನೇ ದಿನ : ದೇಶೀಯ ಕ್ರೀಡೆಗಳು

ಒಟ್ಟು ೧೮ ವಿವಿಧ ದೇಶೀಯ ಕ್ರೀಡೆಗಳನ್ನು ೧೮ ವಿಭಾಗಗಳನ್ನು ಮಾಡಿ, ೬ರಿಂದ ೧೦ನೇ ತರಗತಿಯ ಮಕ್ಕಳನ್ನು ಜೊತೆ ಸೇರಿಸಿಕೊಂಡು ವಿಭಾಗವಾರು ಸ್ಪರ್ಧೆಯ ರೂಪದಲ್ಲಿ ಕ್ರೀಡೆಗಳನ್ನು ಆ0ಯೋಜಿಸಲಾಗಿತ್ತು. ಒಂದೊಂದು ಗುಂಪಿನ ಜವಾಬ್ದಾರಿಯನ್ನು ಒಬ್ಬೊಬ್ಬ ಶಿಕ್ಷಕರಿಗೆ ನೀಡಲಾಯಿತು. ಎಲ್ಲಾ ಶಿಕ್ಷಕರು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.








# ಮೂರನೇ ದಿನ : ಭಿತ್ತಿಚಿತ್ರ ತಯಾರಿಕೆ

ಸದೃಢ ಭಾರತ ಎಂಬ ಕಲ್ಪನೆಯ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ಭಿತ್ತಿಚಿತ್ರ ತಯಾರಿಕೆ ಕಾರ್ಯಕ್ರಮವನ್ನು ನೀಡಲಾಗಿತ್ತು. ೬ ರಿಂದ ೧೦ ನೇ ತರಗತಿಯ ವಿದ್ಯಾರ್ಥಿಗಳೆಲ್ಲರೂ ಸಕ್ರಿಯರಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ತರಗತಿವಾರು ಅತ್ಯುತ್ತಮ ಭಿತ್ತಿಚಿತ್ರವನ್ನು ಗುರುತಿಸಿ ಪ್ರಶಂಸಿಸಲಾಯಿತು.





# ನಾಲ್ಕನೇ ದಿನ : ಯೋಗ ಹಾಗೂ ಸೂರ್ಯ ನಮಸ್ಕಾರ

ಯೋಗ ಶಿಕ್ಷಕರು ಹಾಗೂ ಕ್ರೀಡಾ ಶಿಕ್ಷಕರ ನೇತೃತ್ವದಲ್ಲಿ ಯೋಗ ಹಾಗೂ ಸೂರ್ಯ ನಮಸ್ಕಾರವು ಶಾಲೆಯ ಸುಮಾರು ೪೦೦ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಂದ ನೆರವೇರಲ್ಪಟ್ಟಿತು. ಇದರಲ್ಲಿ ೬ ರಿಂದ ೧೦ ನೇ ತರಗತಿಯ ಮಕ್ಕಳು ಭಾಗವಹಿಸಿದ್ದರು.





# ಐದನೇ ದಿನ : ಪ್ರಬಂಧ ರಚನೆ

ಕ್ರೀಡೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳೇ ಪ್ರಬಂಧದ ವಿಷಯವನ್ನು  ಆಯ್ಕೆ ಮಾಡಿ, ತಯಾರಾಗಿ ಶಾಲೆಯಲ್ಲಿ ನಿಗದಿತ ಸಮಯದಲ್ಲಿ ಎಲ್ಲಾ ವಿದ್ಯಾರ್ಥಿಗಳು ಏಕಕಾಲದಲ್ಲಿ ಪ್ರಬಂಧವನ್ನು ಬರೆದರು. ೬ ರಿಂದ ೧೦ ನೇ ತರಗತಿಯ ಎಲ್ಲಾ ಮಕ್ಕಳು ಭಾಗವಹಿಸಿದ್ದರು.



## ಆರನೇ ದಿನ

## ಪೌಷ್ಟಿಕ ಆಹಾರದ ಅಗತ್ಯತೆ ಎಂಬ ವಿಷಯದ ಬಗ್ಗೆ ಪೋಷಕರಿಗೆ ಮಾಹಿತಿ ಕಾರ್ಯಗಾರ

ಬೆಳೆಯುವ ಮಕ್ಕಳಿಗೆ ಪೌಷ್ಟಿಕ ಆಹಾರದ ಅವಶ್ಯಕತೆ ಎಷ್ಟಿದೆ? ಮತ್ತು ಯಾಕೆ ಅನಿವಾರ್ಯ ಎಂಬ ವಿಷಯದ ಬಗ್ಗೆ ಮಾಹಿತಿ ಕಾರ್ಯಗಾರವು ಶಾಲೆಯಲ್ಲಿ ನಡೆಯಿತು. ತರಗತಿವಾರು ಈ ಮಾಹಿತಿ ಕಾರ್ಯಗಾರ ನಡೆದಿದ್ದು. ತರಗತಿ ಶಿಕ್ಷಕರು ಇದರ ನೇತೃತ್ವ ವಹಿಸಿದ್ದರು.






# ಏಳನೇ ದಿನ : ಸ್ವಚ್ಛತೆ ಹಾಗೂ ಗಿಡ ನೆಡುವ ಕಾರ್ಯಕ್ರಮ

'ಸ್ವಚ್ಛ ಪರಿಸರ ಸ್ವಸ್ಥ ಮನಸ್ಸು' ಎಂಬ ಪರಿಕಲ್ಪನೆಯನ್ನು ಇಟ್ಟುಕೊಂಡು ಶಾಲಾ ವಠಾರದ ಸುತ್ತಮುತ್ತ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿದರು. ಸ್ವಚ್ಛತೆಯ ನಂತರದಲ್ಲಿ 'ಸುಂದರ ವರ್ತಮಾನ ಹಾಗೂ ಭವಿಷ್ಯ'ಕ್ಕಾಗಿ ಗಿಡ ನಡುವ ಕಾರ್ಯಕ್ರಮವು ಶಾಲಾ ಶಿಕ್ಷಕರ ನೇತೃತ್ವದಲ್ಲಿ ನಡೆಯಿತು.






ಒಟ್ಟಿನಲ್ಲಿ ಸದೃಢ ಭಾರತ ಸಪ್ತಾಹ ಕಾರ್ಯಕ್ರಮವು ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯಲ್ಲಿ ಎಲ್ಲರ ಸಲಹೆ, ಸಹಕಾರಗಳೊಂದಿಗೆ ಅಚ್ಚುಕಟ್ಟಾಗಿ ನೆರವೇರಿತು.